# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1037
02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
03. ಉತ್ತರಿಸುವ ದಿನಾಂಕ : 14.12.2023
04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯಾದ್ಯಂತ ಸಂಚಲನ ಉಂಟು ಮಾಡಿದ ಬಿಟ್ ಕಾಯಿನ್ ಹಗರಣದ ಬಗ್ಗೆ ರಾಜ್ಯ ಸರ್ಕಾರ ನೇಮಿಸಿರುವ ಸಿಐಡಿಯ ವಿಶೇಷ ತನಿಖಾ ತಂಡದ ತನಿಖೆ ಪ್ರಸ್ತುತ ಯಾವ ಹಂತದಲ್ಲಿದೆ; | ಕಾಟನ್‌ಪೇಟೆ ಪೊಲೀಸ್ ಠಾಣೆ ಮೊ.ಸಂ. 153/2020 ಕಲಂ: 120(ಬಿ), 379, 384, 420, 465, 468, 471 ರೆ/ವಿ 34 ಐಪಿಸಿ ಹಾಗೂ 66, 66ಸಿ ಐಟಿ ಆಕ್ಟ್-2000 ಪ್ರಕರಣದಲ್ಲಿ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಜಾಲಗಳು ಭಾಗಿಯಾಗಿರುವ ಸಾಧ್ಯತೆ ಇದ್ದು, ಆರೋಪಿಗಳು ಸೈಬರ್ ವಿಷಯಗಳಲ್ಲಿ ಪರಿಣಿತರಿದ್ದು ಬಿಟ್‌ಕಾಯಿನ್ ಮತ್ತು ಡಾರ್ಕ್‌ನೆಟ್‌ಗಳಲ್ಲಿ ವ್ಯವಹಾರ ಮಾಡಿರುವ ಮಾಹಿತಿ ಇರುವುದರಿಂದ ಈ ಎಲ್ಲಾ ವಿಷಯಗಳಲ್ಲಿ ಸಮಗ್ರ ತನಿಖೆ ಕೈಗೊಳ್ಳುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 48 ಸಿಒಡಿ 2023(2), ಬೆಂಗಳೂರು ದಿನಾಂಕ: 30/06/2023 ರಂದು ಹೊರಡಿಸಿದ ಆದೇಶದಲ್ಲಿ ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ ರವರ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಎಡಿಜಿಪಿ ದರ್ಜೆಯ ಅಧಿಕಾರಿಯೊಬ್ಬರ ಮುಖ್ಯಸ್ಥಿಕೆಯಲ್ಲಿ ವಿಶೇಷ ತನಿಖಾ ತಂಡವೊಂದನ್ನು ರಚಿಸಲಾಗಿದ್ದು, ಕಾಟನ್‌ಪೇಟೆ ಪೊಲೀಸ್ ಠಾಣೆ ಮೊ.ಸಂ. 153/2020ರ ತನಿಖೆ ಕೈಗೊಳ್ಳುವಂತೆ ಆದೇಶಿಸಿರುತ್ತದೆ.<br><br>ನಂತರ, ಸದರಿ ವಿಶೇಷ ತನಿಖಾ ತಂಡಕ್ಕೆ ಸರ್ಕಾರದ ಸಮ ಸಂಖ್ಯೆ ಆದೇಶ ದಿನಾಂಕ: 14/07/2023 ಮತ್ತು 11/08/2023 ಗಳಲ್ಲಿ ಈ ಕೆಳಕಂಡ ಪ್ರಕರಣಗಳನ್ನು ವರ್ಗಾವಣೆ ಪಡೆದು ಸಮಗ್ರ ತನಿಖೆಯನ್ನು ಕೈಗೊಳ್ಳುವಂತೆ ಸೂಚಿಸಿ ಆದೇಶಿಸಿದೆ. ಸದರಿ ಪ್ರಕರಣಗಳಲ್ಲಿ ಆರೋಪಿ ಶ್ರೀಕೃಷ್ಣ @ ಶ್ರೀಕಿ ಹಾಗೂ ಇತರರು ವಿವಿಧ ವೆಬ್‌ಸೈಟ್, ಕ್ರಿಪ್ಟೋ ಕರೆನ್ಸಿ ಎಕ್ಸ್‌ಚೇಂಜ್ ಹಾಗೂ ಗೇಮಿಂಗ್ ಪೋರ್ಟಲ್‌ಗಳನ್ನು ಹ್ಯಾಕ್ ಮಾಡಿ ಸಾಕಷ್ಟು ಅಕ್ರಮ ಲಾಭ ಗಳಿಸಿಕೊಂಡಿರುವ ಕುರಿತಾದ ಪ್ರಕರಣಗಳಾಗಿರುತ್ತವೆ.<br><br>1] ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ.45/2020 ಕಲಂ: 66(ಸಿ), 66(ಡಿ) ಐಟಿ ಆಕ್ಟ್-2000 ಹಾಗೂ ಕಲಂ 420 ಐಪಿಸಿ.<br><br>2] ತುಮಕೂರು ನ್ಯೂ ಎಕ್ಸ್‌ಟೆನ್ಷನ್ ಪೊಲೀಸ್ ಠಾಣೆ ಮೊ.ಸಂ. 85/2017 ಕಲಂ: 66, 67, 68 ಐಟಿ ಆಕ್ಟ್-2000 ಹಾಗೂ ಕಲಂ 420 ಐಪಿಸಿ.<br><br>3] ಬೆಂಗಳೂರು ಕೆ.ಜಿ. ನಗರ ಪೊಲೀಸ್ ಠಾಣೆ ಮೊ.ಸಂ. 91/2020 ಕಲಂ: 20(ಬಿ), 23(ಬಿ), 27(ಎ) ಎನ್.ಡಿ.ಪಿ.ಎಸ್ ಆಕ್ಟ್-1985.<br><br>4] ಸಿಐಡಿ, ಸಿಸಿಪಿಎಸ್ ಮೊ.ಸಂ. 09/2019 ಕಲಂ: 43 ರೆ/ವಿ 66, 66(ಸಿ), 66(ಬಿ) ಐಟಿ ಆಕ್ಟ್ ಮತ್ತು ಕಲಂ: 419, 420 ಐಪಿಸಿ.<br><br>5] ಬೆಂಗಳೂರು ನಗರದ ಅಶೋಕನಗರ ಪೊಲೀಸ್ ಠಾಣೆ ಮೊ.ಸಂ. 287/2020 ಕಲಂ: 406, 420 ಐಪಿಸಿ. |

6] ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ. 4801/2018 ಕಲಂ: 65, 66, 66(ಸಿ), 66(ಡಿ) ಐಟಿ ಆಕ್ಟ್-2000 ಹಾಗೂ ಕಲಂ: 419, 420, 471, 468, 474, 465 ಐಪಿಸಿ.

ಕೆ.ಜಿ. ನಗರ ಪೊಲೀಸ್ ಠಾಣೆ ಮೊ.ಸಂ. 91/2020 ಪ್ರಕರಣದ ತನಿಖಾ ಕಾಲದಲ್ಲಿ ವಶಪಡಿಸಿಕೊಂಡ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಹಿಂದಿನ ತನಿಖಾಧಿಕಾರಿಗಳ ಅವಧಿಯಲ್ಲಿ ಸಾಕ್ಷ್ಯಾಧಾರಗಳನ್ನು ನಾಶಪಡಿಸಿರುವ ಬಗ್ಗೆ, ತಿರುಚಿರುವ ಬಗ್ಗೆ ಹಾಗೂ ಅಪವಿತ್ರಗೊಳಿಸಿರುವ ಬಗ್ಗೆ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿ ಕಂಡುಬಂದಿದ್ದರಿಂದ, ಪ್ರಸ್ತುತ ಸದರಿ ಪ್ರಕರಣದ ತನಿಖೆಯನ್ನು ಕೈಗೊಳ್ಳುತ್ತಿರುವ ವಿಶೇಷ ತನಿಖಾ ತಂಡದ ತನಿಖಾಧಿಕಾರಿಗಳು ಈ ಸಂಬಂಧ ದಿನಾಂಕ: 09/08/2023 ರಂದು ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಮೊ.ಸಂ. 302/2023 ಕಲಂ 120(ಬಿ), 409, 204, 426 ಐಪಿಸಿ. ರೀತ್ಯಾ ಪ್ರಕರಣವನ್ನು ದಾಖಲಿಸಿರುತ್ತಾರೆ. ನಂತರ, ಸದರಿ ಪ್ರಕರಣವನ್ನು ಸಹ ತನಿಖೆಗಾಗಿ ಸರ್ಕಾರವು ದಿನಾಂಕ: 11/08/2023 ರಂದು ವಿಶೇಷ ತನಿಖಾ ತಂಡಕ್ಕೆ ವರ್ಗಾಯಿಸಿರುತ್ತದೆ.

ಸರ್ಕಾರದ ಆದೇಶಾನುಸಾರ ಎಲ್ಲಾ 8 ಪ್ರಕರಣಗಳನ್ನು ಸಿಐಡಿ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ತನಿಖಾ ತಂಡಕ್ಕೆ ವರ್ಗಾವಣೆ ಪಡೆದು, ತನಿಖೆಯನ್ನು ಮುಂದುವರೆಸಲು ಘನ ನ್ಯಾಯಾಲಯದಿಂದ ಅಗತ್ಯ ಅನುಮತಿಯನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಲಾಗಿದೆ.

ವಿಶೇಷ ತನಿಖಾ ತಂಡದಲ್ಲಿ ಮೇಲ್ಕಂಡ ಪ್ರಕರಣಗಳ ತನಿಖೆಯನ್ನು ಕೈಗೊಳ್ಳಲಾಗಿದ್ದು, ತನಿಖಾ ಕಾಲದಲ್ಲಿ ಪ್ರಕರಣದ ಎಲ್ಲಾ ಆರೋಪಿತರುಗಳ ಮರುವಿಚಾರಣೆ, ಹಲವಾರು ಸಾಕ್ಷಿದಾರರು ಮತ್ತು ಹಿಂದಿನ ಪೊಲೀಸ್ ತನಿಖಾಧಿಕಾರಿಗಳ ವಿಚಾರಣೆ ಕೈಗೊಳ್ಳಲಾಗಿದೆ. ಅಲ್ಲದೇ, ಪತ್ರ ವ್ಯವಹಾರ ಕೈಗೊಂಡು ತನಿಖೆಗೆ ಅಗತ್ಯವಿರುವ ದಾಖಲಾತಿ ಮತ್ತು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಕೃತ್ಯ ನಡೆದ ಹಾಗೂ ಇತರೆ ಸ್ಥಳಗಳ ಪಂಚನಾಮೆಗಳನ್ನು ಜರುಗಿಸಲಾಗಿರುವುದಲ್ಲದೇ, ಪ್ರಕರಣದ ಆರೋಪಿತರು, ಈ ಹಿಂದೆ ತನಿಖೆಯಲ್ಲಿ ನೆರವಾಗಿದ್ದ ತಾಂತ್ರಿಕ ಪರಿಣಿತರ ಮನೆ ಮತ್ತು ಕಛೇರಿಗಳು ಹಾಗೂ ಈ ಹಿಂದೆ ತನಿಖೆಯಲ್ಲಿ ಭಾಗಿಯಾಗಿದ್ದ ಪೊಲೀಸ್ ಅಧಿಕಾರಿಗಳ ಮನೆಗಳು ಹೀಗೆ ಬೆಂಗಳೂರು, ಗೋವಾ ಹಾಗೂ ಪಶ್ಚಿಮ ಬಂಗಾಳದಲ್ಲಿರುವ ಒಟ್ಟು 11 ಮನೆ ಮತ್ತು ಕಛೇರಿಗಳನ್ನು ಶೋಧನೆ ಮಾಡಿ ಅಗತ್ಯ ದಾಖಲಾತಿಗಳು ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ರೀತಿಯಾಗಿ ವಶಪಡಿಸಿಕೊಂಡ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ ಹಾಗೂ ಕೆಲವು ಎಲೆಕ್ಟ್ರಾನಿಕ್ ಉಪಕರಣಗಳನ್ನು ತಾಂತ್ರಿಕ ಪರಿಣಿತರಿಂದ ಪರಿಶೀಲಿಸಿ ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಕಲೆಹಾಕಲಾಗುತ್ತಿದೆ. ಆರೋಪಿಗಳ ಕ್ರಿಪ್ಟೋ ವ್ಯಾಲೆಟ್‌ಗಳಲ್ಲಿನ ಹಾಗೂ ಬ್ಯಾಂಕ್ ಖಾತೆಗಳ ವ್ಯವಹಾರಗಳನ್ನು ಪರಿಶೀಲನೆ ಕಾರ್ಯವನ್ನು ಕೈಗೊಳ್ಳಲಾಗಿದೆ ಮತ್ತು ಪ್ರಕರಣವು ಬಿಟ್‌ಕಾಯಿನ್ ಟ್ರೇಡಿಂಗ್, ಬ್ಲಾಕ್ ಚೈನ್, ಡಾರ್ಕ್‌ವೆಬ್‌ಗಳಿಗೆ ಸಂಬಂಧಪಟ್ಟಿರುವುದರಿಂದ ಇದನ್ನು ಭೇದಿಸಲು ಸರ್ಕಾರದ ಅನುಮೋದನೆ ಪಡೆದು ತಾಂತ್ರಿಕ ಪರಿಣಿತರ ಸೇವೆಯನ್ನು ಸಹ ಬಳಸಿಕೊಳ್ಳಲಾಗುತ್ತಿದೆ.

| | | |
|---|---|---|
| | | ತನಿಖೆಗಾಗಿ ಅವಶ್ಯವಿರುವ ಕ್ರಿಪ್ಟೋಕರೆನ್ಸಿ ಸಂಬಂಧಿತ ಮಾಹಿತಿ ಮತ್ತು ದಾಖಲಾತಿಗಳನ್ನು ಹಲವಾರು ವಿದೇಶಿ ಸಂಸ್ಥೆಗಳು ಹಾಗೂ ಕ್ರಿಪ್ಟೊ ಕರೆನ್ಸ್ ಎಕ್ಸ್‌ಚೇಂಜ್‌ಗಳಿಂದ ಪಡೆಯಬೇಕಿರುವುದರಿಂದ ಅನ್ವಯಿಕ ಕಾನೂನು ಮತ್ತು ನಿಯಮಗಳ ಅನ್ವಯ Mutual Legal Assistance Treaty (MLAT) ಸೇವೆಯ ಮೂಲಕ ಯು.ಎಸ್.ಎ, ಹಾಂಗ್‌ಕಾಂಗ್, ಕೊರಿಯಾ, ಸಿಂಗಾಪುರ, ಇರಾನ್, ಫಿನ್‌ಲ್ಯಾಂಡ್, ಟರ್ಕಿ, ನೈಜೀರಿಯಾ, ಲೆಕ್ಸಂಬರ್ಗ್ ದೇಶಗಳಿಗೆ ಮನವಿ ಸಲ್ಲಿಸಲಾಗಿದೆ. ಮುಂದುವರೆದು, ಇದಲ್ಲದೆ ಐರ್ಲೆಂಡ್, ಸಿಷೆಲ್ಸ್, ಸ್ವಿಜರ್‌ಲ್ಯಾಂಡ್ ಮುಂತಾದ ದೇಶಗಳಿಂದ ಅಗತ್ಯ ಮಾಹಿತಿ ತರಿಸಿಕೊಡುವಂತೆ ಕೋರಿ ಇಂಟರ್‌ಪೋಲ್ ಮುಖಾಂತರ ಮನವಿಯನ್ನು ಸಹ ಸಲ್ಲಿಸಲಾಗಿದ್ದು, ಸದರಿ ಮಾಹಿತಿ ಮತ್ತು ದಾಖಲಾತಿಗಳು ಸ್ವೀಕೃತಗೊಳ್ಳಬೇಕಿವೆ. |
| ಆ | ತನಿಖೆಯಿಂದ ಮೇಲ್ನೋಟಕ್ಕೆ ಕಂಡು ಬಂದಿರುವ ಅಂಶಗಳಾವುವು; | ಎಲ್ಲಾ 8 ಪ್ರಕರಣಗಳು ತನಿಖಾ ಹಂತದಲ್ಲಿದ್ದು, ವಿಧಿವಿಜ್ಞಾನ ಪ್ರಯೋಗಾಲಯದಿಂದ ಹಾಗೂ ಕ್ರಿಪ್ಟೊ ಕರೆನ್ಸಿ ತಾಂತ್ರಿಕ ಪರಿಣತರುಗಳಿಂದ ವಿಶ್ಲೇಷಣಾ ವರದಿಗಳು ಬರಬೇಕಿರುತ್ತದೆ. ಅಲ್ಲದೇ, ವಿದೇಶಿ ಮೂಲದ ಸಂಸ್ಥೆಗಳು ಹಾಗೂ ಕ್ರಿಪ್ಟೊ ಕರೆನ್ಸ್ ಎಕ್ಸ್‌ಚೇಂಜ್‌ಗಳಿಂದ ಮಾಹಿತಿ ಮತ್ತು ದಾಖಲಾತಿಗಳು ಬರುವುದು ಬಾಕಿ ಇರುವುದರಿಂದ ಈ ಹಂತದಲ್ಲಿ ಪ್ರಕರಣದ ಕುರಿತಾಗಿ ನಿರ್ದಿಷ್ಟ ಹಾಗೂ ಅಂತಿಮ ಅಭಿಪ್ರಾಯಕ್ಕೆ ಬರುವುದು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುವ ಅಂಶಗಳನ್ನು ಒದಗಿಸಿಕೊಡುವುದು ಸಾಧ್ಯವಾಗುತ್ತಿಲ್ಲ. |
| ಇ | ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದೇ? | ತನಿಖೆಗಾಗಿ ಅಗತ್ಯವಿರುವ ಸಾಕ್ಷ್ಯಾಧಾರಗಳನ್ನು ಕ್ರೋಡೀಕರಿಸಿಕೊಂಡು ಅದರಿಂದ ಹೊರಹೊಮ್ಮುವ ಅಂಶಗಳ ಆಧಾರದ ಮೇಲೆ ಶೀಘ್ರವಾಗಿ ತನಿಖೆ ಪೂರ್ಣಗೊಳಿಸಿ ಘನ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುವುದು ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು. |

HD 29 SDN 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು